**ಸಾಕ್ಷಿಯನ್ನು ದಿಃ 10.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾವು ಚಿಕ್ಕವರಿದ್ದಾಗಲೇ ಅರ್ಜಿದಾರರಾದ ಪ್ರಸಾದ್ ರವರ ತಂದೆ ತಾಯಿ ತೀರಿಕೊಂಡಿದ್ದಾರೆ. ಅರ್ಜಿದಾರರು ಒಬ್ಬನೇ ಮಗ. ನಾನು ಅರ್ಜಿದಾರರಿಗೆ ಚಿಕ್ಕಪ್ಪನಾಗಬೇಕು. 1 ನೇ ಅರ್ಜಿದಾರರು ಮೃತ ಅರ್ಜಿದಾರರಿಗೆ ತಾತ ಆಗಬೇಕು. ಅವರು ನನ್ನೊಂದಿಗೆ ವಾಸ ಮಾಡುತ್ತಿದ್ದಾರೆ. ಅಪಘಾತ ದಿಃ 18.02.2024 ರಲ್ಲಿ ಆಗಿದೆ ಎಂದರೆ ಸರಿ. ಅರ್ಜಿದಾರರು ದಿಃ 28.04.2025 ಕ್ಕೆ ತೀರಿದ್ದಾರೆ ಎಂದರೆ ಸರಿ. ಅಪಘಾತ ಆದ ಒಂದು ವರ್ಷದ ನಂತರ ತೀರಿಕೊಂಡಿದ್ದಾರೆ ಎಂದರೆ ಸರಿ. ಮೊದಲಿಗೆ ವಿದ್ಯಾರಣ್ಯ ಆಸ್ಪತ್ರೆಗೆ ದಾಖಲಿಸಿ ಅಲ್ಲಿಂದ ಜೆ.ಎಸ್.ಎಸ್ ಆಸ್ಪತ್ರೆಗೆ ದಾಖಲಿಸಿ ಆನಂತರ ಸ್ಪಂದನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೇವೆ. ವಿದ್ಯಾರಣ್ಯ ಆಸ್ಪತ್ರೆಯಲ್ಲಿ ಒಂದು ವಾರ ಆಸ್ಪತ್ರೆಯಲ್ಲಿದ್ದರು. ಇನ್ನೂ ಎರಡು ಆಸ್ಪತ್ರೆಯಲ್ಲಿ ಎಷ್ಟು ದಿನ ಇದ್ದರು ಎಂದು ನೆನಪಿಲ್ಲ.

2. ಅಪಘಾತವನ್ನು ನಾನು ಕಣ್ಣಾರೆ ಕಂಡಿರುವುದಿಲ್ಲ. ನಿಪಿ. 16 ರ ಪ್ರಕಾರ ಅರ್ಜಿದಾರರು ಬೈಕ್ ಚಲಾಯಿಸಿಕೊಂಡು ಸೇತುವೆಗೆ ಬಡಿದು ಅಪಘಾತ ಪಡಿಸಿಕೊಂಡಿದ್ದಾರೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಅರ್ಜಿದಾರರು ಬೈಕ್ ಚಲಾಯಿಸಿಲ್ಲ ಎನ್ನುತ್ತಾರೆ. ಅರ್ಜಿದಾರರು ತೀರಿಕೊಂಡಾಗ ನಾನು ಪೋಲೀಸರಿಗೆ ಮಾಹಿತಿ ನೀಡಿಲ್ಲ. ಆತನ ಪಿ.ಎಂ ವರದಿಯನ್ನು ಮಾಡಿಸಿಲ್ಲ. ಅರ್ಜಿದಾರರಿಗೆ ಕಾಲಿಗೆ ಶಸ್ತ್ರ ಚಿಕಿತ್ಸೆ ಆಗಿದ್ದು ತಲೆಗೆ ಪೆಟ್ಟಾಗಿತ್ತು. ವಿದ್ಯಾರಣ್ಯ ಆಸ್ಪತ್ರೆ, ಸ್ಪಂದನಾ ಆಸ್ಪತ್ರೆ ಹಾಗೂ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

3. ಅಪಘಾತದ ಬಗ್ಗೆ ನನಗೆ ಕೇಶವಮೂರ್ತಿ ಕರೆ ಮಾಡಿ ತಿಳಿಸಿದ್ದಾರೆ. ಆತ ಅರ್ಜಿದಾರರಾದ ಪ್ರಸಾದ್ ನ ಸ್ನೇಹಿತ. ಅರ್ಜಿದಾರರ ಸಂಪಾದನೆಯ ಬಗ್ಗೆ ನನಗೆ ಮಾಹಿತಿ ಇಲ್ಲ

ಎಂದರೆ ಸರಿಯಲ್ಲ. ಆತನ ಉದ್ಯೋಗ ಹಾಗೂ ಆದಾಯದ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಅರ್ಜಿದಾರ ಅಪಘಾತದಿಂದ ಗಾಯಗಳಿಂದ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದಾದ ಗಾಯಗಳಿಂದ ಮೃತಪಟ್ಟಿದ್ದರೆ ನಾವು ಪೋಲೀಸರಿಗೆ ಮಾಹಿತಿ ತಿಳಿಸಿ ಪಿ.ಎಂ ವರದಿ ಮಾಡಿಸುತ್ತಿದ್ದೇವು ಎಂದರೆ ನನಗೆ ಆ ಬಗ್ಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ನಮಗೆ ಗೊತ್ತಿದ್ದರು ಸಹ ಆತ ಅಪಘಾತದಿಂದ ಆದ ಗಾಯಗಳಿಂದ ಮೃತಪಡದೇ ಇರುವ ಕಾರಣ ನಮ್ಮ ನಿರ್ಲಕ್ಷತನದಿಂದ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಇತರೆ ಅರ್ಜಿದಾರರ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಪ್ರಸಾದ್ ಬೈಕ್ ಚಲಾಯಿಸಿದ್ದ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಸತ್ಯ ಮರೆಮಾಚಲು ಎರಡು ದಿನ ತಡವಾಗಿ ಪೋಲೀಸರಿಗೆ ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ಆತನೇ ಬೈಕ್ ಚಲಾಯಿಸಿ ಬಿದ್ದು ಗಾಯಗೊಂಡಿದ್ದನ್ನು ಹೇಳಿದರೆ ಪರಿಹಾರ ಸಿಗುವುದಿಲ್ಲ ಎಂದು ಸತ್ಯವನ್ನು ಮರೆಮಾಚಿ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಔಷಧಿ ಬಿಲ್ಲುಗಳಿಗೆ ಪೂರಕವಾದ ದಾಖಲೆಗಳನ್ನು ಹಾಜರು ಪಡಿಸದೇ ಇರುವ ಕಾರಣ ನಾವು ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.